# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ-590 018, ಕರ್ನಾಟಕ ರಾಜ್ಯ

*ಪ್ರೋ. ಎ.ಎಸ್. ದೇಶಪಾಂಡೆ ಬಿ.ಇ., ಎಮ್.ಟೆಕ್.,ಪಿಎಚ್.ಡಿ.,*
*ಕುಲಸಚಿವರು*

*ದೂರವಾಣಿ ಸಂ. (0831) 2498100*
*ಫ್ಯಾಕ್ಸ ಸಂ. (0831) 2405467*


ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2022-23/ಐ.ಎಫ್.ಟಿ. ಸಂ.8/ 1357 ದಿನಾಂಕ: - 7 JUN 2022

## ಬಹಿರಂಗ ಹರಾಜು ಪ್ರಕಟಣೆ-4ನೇ ಕರೆ

ವಿ.ತಾ.ವಿ. "ಜ್ಞಾನ ಸಂಗಮ" ಆವರಣ, ಬೆಳಗಾವಿಯ ವಿವಿಧ ವಾಹನಗಳನ್ನು ದಿನಾಂಕ: 14-06-2022 ರಂದು ಮುಂಜಾನೆ 11.00 ಗಂಟೆಗೆ ಕುಲಸಚಿವರು, ವಿತಾವಿ, "ಜ್ಞಾನ ಸಂಗಮ", ಬೆಳಗಾವಿ ಕಾರ್ಯಾಲಯದಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ಸದರಿ ವಾಹನಗಳನ್ನು ಆವರಣದ ಬಸ್ ಪಾರ್ಕಿಂಗ್ ಹತ್ತಿರ ದಿನಾಂಕ:08-06-2022 ರಿಂದ 13-06-2022 ರ ವರೆಗೆ ಕುಲಸಚಿವರು, ವಿತಾವಿ, "ಜ್ಞಾನ ಸಂಗಮ", ಬೆಳಗಾವಿ ಈ ಕಛೇರಿಗಳ ಕೆಲಸದ ವೇಳೆಯಲ್ಲಿ ವಾಹನವನ್ನು ವೀಕ್ಷಿಸಬಹುದು. ವಾಹನಗಳ ವಿವರಗಳು ಈ ಕೆಳಗಿನಂತಿವೆ,

| ಅ. ಸಂ | ವಾಹನ ಮತ್ತು ಸಂಖ್ಯೆ | ಸಂಚರಿಸಿದ ಕಿ.ಮಿ. ಮತ್ತು ದಿನಾಂಕ | ಸಾರಿಗೆ ಅಧಿಕಾರಿಗಳಿಂದ ಪಡೆದ ಮೌಲ್ಯಮಾಪನದ ಮೊತ್ತ | ಉಪಯುಕ್ತ / ನಿರುಪಯುಕ್ತ | ಹರಾಜಿಗೆ ಮುಂಚಿತವಾಗಿ ಪಾವತಿಸುವ ಮೊತ್ತ |
|---|---|---|---|---|---|
| 1. | ಕೆಎ 22 ಬಿ 2709 ಟೆಂಪೋ ಟ್ರಾವೆಲರ್ | 3,80,945 ಕಿ.ಮಿ 25/02/2021 | 97,000/- | ಉಪಯುಕ್ತ | 10,000/- |
| 2. | ಕೆಎ 22 ಬಿ 2718 ಟೆಂಪೋ ಟ್ರಾವೆಲರ್ | 3,64,954 ಕಿ.ಮಿ 25/02/2021 | 99,000/- | ಉಪಯುಕ್ತ | 10,000/- |
| 3. | ಕೆಎ 22 ಪಿ 9189 ಮಾರುತಿ ಎಸ್ಎಕ್ಸ್4 | 2,15,830 ಕಿ.ಮಿ. 13/02/2021 | 1,10,000/- | ಉಪಯುಕ್ತ | 10,000/- |

ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚಿತವಾಗಿ ಪ್ರತಿಯೊಂದು ವಾಹನಕ್ಕೆ **ರೂ.10,000=00** ಗಳ ಡಿ.ಡಿ. ಯನ್ನು ವಿತ್ತಾಧಿಕಾರಿಗಳು, ವಿತಾವಿ, ಬೆಳಗಾವಿ ಇವರ ಹೆಸರಿನಲ್ಲಿ ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕಿನಿಂದ ಪಡೆದು ಸಲ್ಲಿಸುವುದು ಮತ್ತು ತಮ್ಮ ಹೆಸರುಗಳನ್ನು ಕುಲಸಚಿವರು, ವಿತಾವಿ, ಬೆಳಗಾವಿ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಹರಾಜಿನ ನಿಬಂಧನೆ ಮತ್ತು ವಿವರಗಳನ್ನು ಕಛೇರಿಯ ಪ್ರಕಟಣಾ ಫಲಕ ಮತ್ತು ವಿತಾವಿ ಯ ಅಂತರ ಜಾಲ *http://www.vtu.ac.in tenders* ರಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಸ್ಥಾನಿಕ ಅಭಿಯಂತರು, ವಿ.ತಾ.ವಿ., ಬೆಳಗಾವಿ ಫೋ: 0831-2498181 ಸಂಪರ್ಕಿಸಬಹುದು.

**ಕರಾರುಗಳು:-**

1. ಅತಿ ಹೆಚ್ಚು ಬಿಡ್ಡುದಾರರು (Highest Bidder) ಹರಾಜು ಪೂರ್ಣಗೊಂಡ ನಂತರ ಅದೇ ದಿನ ಬಿಡ್ಡಿನ ಮೊತ್ತಾದ ಶೇಕಡಾ 25 ರಷ್ಟು ಹಣವನ್ನು ವಿತ್ತಾಧಿಕಾರಿಗಳು, ವಿತಾವಿ, ಬೆಳಗಾವಿ ಇವರ ಹೆಸರಿನಲ್ಲಿ ಡಿ.ಡಿ. ಪಡೆದು ಸಲ್ಲಿಸತಕ್ಕದ್ದು. (ಠೇವಣಿ ಹಣ ಹೊರತುಪಡಿಸಿ) ತಪ್ಪಿದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

2. ಹರಾಜಿನ ನಂತರ ಮೋಟಾರ ವಾಹನವನ್ನು ಪುನರ್ ನೊಂದಣಿಗಾಗಿ ಈ ಇಲಾಖೆಯು ಯಾವ ಜವಾಬ್ದಾರಿಯನ್ನು ವಹಿಸುವುದಿಲ್ಲ. ಯಶಸ್ವಿಯಾದ ಬಿಡ್ಡುದಾರರು ಸ್ವಂತ ಖರ್ಚಿನಿಂದ ನೋಂದಣಿ ಇತರೆ ಕೆಲಸಗಳನ್ನು ಮಾಡಿಸಿಕೊಳ್ಳಬೇಕು. ವರ್ಗಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ಮಾತ್ರ ಸೂಕ್ತ ಸಹಿಗಳೊಂದಿಗೆ ಒದಗಿಸಲಾಗುವುದು.

3. ಅತಿ ಹೆಚ್ಚು ಬಿಡ್ಡುದಾರರು (Highest Bidder) ಹರಾಜು ಪೂರ್ಣಗೊಂಡ ನಂತರ ಹದಿನೈದು (15) ದಿನದೊಳಗಾಗಿ ಇನ್ನುಳಿದ ಶೇಕಡಾ 75 ರಷ್ಟು ಹಣ ಮತ್ತು ಶೇಕಡಾ 18.00 ರಷ್ಟು ಜಿ.ಎಸ್.ಟಿ. ತೆರಿಗೆ ಸಹ ಸೇರಿಸಿ, ವಿತ್ತಾಧಿಕಾರಿಗಳು, ವಿತಾವಿ, ಬೆಳಗಾವಿ ಇವರ ಹೆಸರಿನಲ್ಲಿ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕಿನಿಂದ ಡಿ.ಡಿ. ಪಡೆದು ಸಲ್ಲಿಸಿ ನಂತರ ಬಿಡ್ಡುದಾರರ ಖರ್ಚಿನಲ್ಲಿಯೇ ವಾಹನವನ್ನು ತೆಗೆದುಕೊಂಡು ಹೋಗತಕ್ಕದ್ದು. ನಿಗದಿತ ದಿನಾಂಕ ಸಮಯದ ನಂತರ ವಾಹನವನ್ನು ಸಾಗಿಸಲು ತಪ್ಪಿದಲ್ಲಿ ಭದ್ರತಾ ಠೇವಣಿ ಹಣವನ್ನು ಮತ್ತು ಅದೇ ದಿನ ಕಟ್ಟಿದ ಶೇಕಡಾ 25 ರಷ್ಟು ಹಣವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4. ಈ ಬಹಿರಂಗ ಹರಾಜು ಮತ್ತು ಬಿಡ್ಡುದಾರರನ್ನು ಯಾವುದೇ ಕಾರಣಗಳನ್ನು ತೋರಿಸದೆ ತಿರಸ್ಕರಿಸುವ/ಪುರಸ್ಕರಿಸುವ ಹಕ್ಕು ಈ ಕೆಳಗಿನ ಅಧಿಕಾರಿಗಳಿಗೆ ಇರುತ್ತದೆ.

ಸಹಿ/-
ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,
ಬೆಳಗಾವಿ

.2..

ಪ್ರತಿಯನ್ನು:-

1.ಗೌರವಾನ್ವಿತ ಕುಲಪತಿಗಳು, ವಿತಾವಿ, ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳು, ವಿತಾವಿ, ಬೆಳಗಾವಿ ಇವರ ಮುಖಾಂತರ ಮಾಹಿತಿಗಾಗಿ.

2.ಉಪ-ನಿರ್ದೇಶಕರು, ವಾರ್ತಾ ಮತ್ತು ಪ್ರಸಾರ ಇಲಾಖೆ, ಬೆಳಗಾವಿ ಇವರಿಗೆ ಕನ್ನಡ ದಿನಪತ್ರಿಕೆಯಲ್ಲಿ **5 cms X 7 cms** ಪ್ರಕಟಿಸಲು ಕೋರಲಾಗಿದೆ.

3.ವಿತ್ತಾಧಿಕಾರಿಗಳು, ವಿತಾವಿ, ಬೆಳಗಾವಿ ಇವರ ಮಾಹಿತಿಗಾಗಿ.

4.ಸ್ಥಾನಿಕ ಅಭಿಯಂತರು, ವಿತಾವಿ, ಬೆಳಗಾವಿ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

5.ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಳಗಾವಿ ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

6.ನಿರ್ದೇಶಕರು(ಪ್ರಭಾರಿ),ಐಟಿಐಎಸ್‌ಎಮ್‌ಯು., ಸಿಎನ್‌ಸಿ ವಿಭಾಗ, ವಿತಾವಿ., ಬೆಳಗಾವಿ ಇವರ ಮಾಹಿತಿಗಾಗಿ ಮತ್ತು ವಿತಾವಿ ಅಂತರಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.

7.ವಿತಾವಿಯ ನಾಮಫಲಕಕ್ಕೆ.

8.ಕಡತಕ್ಕೆ.

ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,
ಬೆಳಗಾವಿ